ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ದಿನಾಂಕ : 29.07.2025

**ಪಾಟೀ ಸವಾಲು : 7 ನೇ ಪ್ರತಿವಾದಿ ಪರ ಶ್ರೀ ಎಸ್ ಎನ್ ಬಿ ವಕೀಲರಿಂದಃ**

ನಾನು ಈ ಪ್ರಕರಣವನ್ನು ಯಾರ ಯಾರ ಮೇಲೆ ದಾಖಲಿಸಿದ್ದೇನೆಂತಾ ಹೇಳಲು ಬರುವುದಿಲ್ಲ. ಸಾಕ್ಷಿ ಮುಂದುವರೆದು ಇಬ್ಬರ ಮೇಲೆ ಈ ದಾವೆ ದಾಖಲಿಸಿದ್ದೇನೆಂತಾ ನುಡಿದಿರುತ್ತಾರೆ. ಈ ದಾವೆಯನ್ನು 8 ನೇ ಪ್ರತಿವಾದಿ ಮತ್ತು ಅವಳ ಗಂಡನ ಮೇಲೆ ದಾಖಲಿಸಿದ್ದೇನೆಂದು ನುಡಿಯುತ್ತಾರೆ. ನನ್ನ ತಂದೆಗೆ 5 ಜನ ಮಕ್ಕಳು ಇರುತ್ತೇವೆ. ಈ ಪ್ರಕರಣದಲ್ಲಿ ನನ್ನ ತಂದೆ, ತಾಯಿ ಮತ್ತು ಸಹೋದರರರನ್ನು ಪಾರ್ಟಿ ಮಾಡಿದ್ದೇನೆ. 6 ನೇ ಪ್ರತಿವಾದಿಗೆ ಈಗ 25 ವರ್ಷ ವಯಸ್ಸಾಗಿರುತ್ತದೆ. ಈ ದಾವೆ ದಾಖಲು ಮಾಡುವಾಗ 6 ನೇ ಪ್ರತಿವಾದಿಗೆ 14-15 ರಿಂದ ವಯಸ್ಸು ಇತ್ತು. 6 ನೇ ಪ್ರತಿವಾದಿ ವಯಸ್ಕನಾದ ಮೇಲೆ ಅ.ಸ.ದಾರ ಕಡಿಮೆ ಮಾಡಲು ಅರ್ಜಿ ಸಲ್ಲಿಸಿರುವುದಿಲ್ಲ. ಈ ದಾವೆಯನ್ನು ಸಿಂಗಿ ವಕೀಲರು ದಾಖಲು ಮಾಡಿರುತ್ತಾರೆ. ಈ ದಾವೆ ದಾಖಲು ಮಾಡಲು ನಾನು, ನನ್ನ ತಂದೆ, ತಾಯಿ ಮತ್ತು ಸಹೋದರ ಮತ್ತು ಸಹೋದರಿಯರು ಅಂದರೆ 1 ರಿಂದ 6 ನೇ ಪ್ರತಿವಾದಿಯರು ಸೇರಿ ವಕೀಲರಿಗೆ ಮಾಹಿತಿ ನೀಡಿದ್ದೇವೆ. ಈ ಮೊದಲಿಂದಲೂ ನನ್ನ ತಂದೆ ಮತ್ತು ನಾನು ಸೇರಿಕೊಂಡು ವಕೀಲರಿಗೆ ಮಾಹಿತಿ ಕೊಡುವುದು ಮತ್ತು ನ್ಯಾಯಾಲಯಕ್ಕೆ ಅಡ್ಡಾಡುವುದು ಮಾಡುತ್ತೇವೆ ಎಂದರೆ ಸರಿ. ನಾನು ಮತ್ತು ಪ್ರತಿವಾದಿ ನಂಃ 1 ರಿಂದ 6 ಎಲ್ಲರೂ ಚೆನ್ನಾಗಿ ಒಂದೇ ಘರಾಣೇ ಮನೆಯಲ್ಲಿ ಇದ್ದೇವೆ ಎಂದರೆ ಸರಿ. ನಮ್ಮ ವಕೀಲರಿಗೆ ಈ ದಾವೆ ನೆಡಸಲು ಪೀಜ್ ನ್ನು ನಮ್ಮ ತಂದೆ 1 ನೇ ಪ್ರತಿವಾದಿ ಕೊಡುತ್ತಾರೆ ಎಂದರೆ ಸರಿ. ನನಗೂ ಮತ್ತು 1 ರಿಂದ 6 ನೇ ಪ್ರತಿವಾದಿಯರ ಮಧ್ಯೆ ಯಾವುದೇ ವೈಮನಸ್ಸು ಇಲ್ಲ ಎಂದರೆ ಸರಿ. ಆಸ್ತಿ ಹಂಚಿಕೆ ಮಾಡಿಕೊಳ್ಳಲು ನನ್ನ ಮತ್ತು 1 ರಿಂದ 6 ನೇ ಪ್ರತಿವಾದಿಯರ ಮಧ್ಯೆ ಯಾವುದೇ ತಕರಾರು ಇಲ್ಲ ಎಂದರೆ ಸರಿ. ಈ ದಾವೆಯಲ್ಲಿ ಎಷ್ಟು ಆಸ್ತಿಗಳನ್ನು ದಾವೆದ ಆಸ್ತಿಗಳು ಅಂತಾ ತೋರಿಸಿದ್ದೇವೆಂತಾ ನೆನಪಿಲ್ಲ. 7 ನೇ ಪ್ರತಿವಾದಿಗೆ ಮಾರಾಟ ಮಾಡಿದ ಆಸ್ತಿಯನ್ನು ಮಾತ್ರ ಈ ದಾವೆಯಲ್ಲಿ ಸೇರಿಸೋಣ ಅಂತಾ 1 ನೇ ಪ್ರತಿವಾದಿ ಹೇಳಿದ್ದರಿಂದ ಸದರಿ 1 ಆಸ್ತಿಯನ್ನು ಈ ದಾವೆಯಲ್ಲಿ ಸೇರಿಸಿದ್ದೇವೆ ಎಂದರೆ ಸರಿ. ಲಕಮಾಜಿಕೊಪ್ಪ ಗ್ರಾಮದ ರಿ.ಸ.ನಂಃ 22/2 ಅ ಕ್ಷೇತ್ರ 04 ಎಕರೆ, 09 ಗುಂಟೆ ಇದನ್ನು ಒಂದೇ ದಾವೆದ ಆಸ್ತಿ ಅಂತಾ ತೋರಿಸಿ ದಾವೆ ಸಲ್ಲಿಸಿದ್ದೇನೆಂದರೆ ಸರಿ. 7 ನೇ ಪ್ರತಿವಾದಿ ತಕರಾರು ಸಲ್ಲಿಸಿದ ನಂತರ ಉಳಿದ ಆಸ್ತಿಯನ್ನು ಈ ದಾವೆಯಲ್ಲಿ ಸೇರಿಸಿದ್ದೇವೆಂದರೆ ಸರಿ. ನಮ್ಮ ಘರಾಣೇಗೆ ಎಷ್ಟು ಆಸ್ತಿ ಇವೆ ಅಂತಾ ನನಗೆ ಗೊತ್ತಿಲ್ಲ.

2. ನನ್ನ ತಂದೆಗೆ ಇಬ್ಬರು ಸಹೋದರಿಯರು, ಒಬ್ಬ ಅಣ್ಣ ಇರುತ್ತಾನೆ. ನನ್ನ ತಂದೆ, ನನ್ನ ತಂದೆಯ ಸಹೋದರ ಸಹೋದರಿಯರ ಮಧ್ಯೆ ಯಾವುದೇ ಹಿಸ್ಸೆಯಾಗಿರುವುದಿಲ್ಲ. ಸದರಿಯವರನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ. ನಮ್ಮ ತಂದೆಯ ಸಹೋದರಿಯರು ಮಾನ್ಯ ಹಿರಿಯ ದಿವಾಣಿ ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿದ್ದಾರೆಂದರೆ ನನಗೆ ಗೊತ್ತಿಲ್ಲ. ನನ್ನ ತಂದೆ ಮತ್ತು

ಅವನ ಸಹೋದರಿಯವರು ಚೆನ್ನಾಗಿದ್ದಾರೆಂದರೆ ಸರಿ. ನನ್ನ ದೊಡ್ಡಪ್ಪ ಮತ್ತು ನಮ್ಮ ತಂದೆ ಚೆನ್ನಾಗಿದ್ದಾರೆಂದರೆ ಸರಿ. ನನ್ನ ತಂದೆಯ ಸಹೋದರಿಯರು ಮತ್ತು ನನ್ನ ತಂದೆ ಸೇರಿಕೊಂಡು ಮಾನ್ಯ ಹಿರಿಯ ದಿವಾಣಿ ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿದ್ದಾರೆಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯಲ್ಲಿ ಈ ದಾವೆಯ ಆಸ್ತಿಗಳು ಇವೆ ಎಂದರೆ ನನಗೆ ಗೊತ್ತಿಲ್ಲ. ಈ ಬಗ್ಗೆ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ರಿ.ಸ.ನಂಃ 22/2 ಅ ಇದನ್ನು ನನ್ನ ತಂದೆ 2001-02 ರಲ್ಲಿ 7 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾನೆ. ದಾವಾ ಶೆಡ್ಯೂಲ್ 1 ನ್ನು ದಿನಾಂಕಃ 26.02.2003 ರಂದು ನಮ್ಮ ತಂದೆ 7 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾನೆಂದರೆ ಸರಿ. 2003 ರಲ್ಲಿ 3 ನೇ ಪ್ರತಿವಾದಿಯ ಮದುವೆಯಾಗಿತ್ತು ಮತ್ತು ಉಳಿದ 4 ರಿಂದ 6 ನೇ ಪ್ರತಿವಾದಿ ಮತ್ತು ನನ್ನ ಮದುವೆಯಾಗಿರಲಿಲ್ಲ. 2003 ರಲ್ಲಿ ನಮ್ಮ ಘರಾಣೇಯಲ್ಲಿ ದುಡಿಯುವ ವ್ಯಕ್ತಿ ನಮ್ಮ ತಂದೆ ಒಬ್ಬನೇ ಎಂದರೆ ಸರಿ. ನಮ್ಮ ಘರಾಣೇಗೆ ಅಡಚಣೆ ಇರುವುದರಿಂದ ರೂ.1,71,000/- ಪಡೆದುಕೊಂಡು ನಮ್ಮ ತಂದೆ ಮಾರಾಟ ಮಾಡಿದ್ದಾನೆಂದರೆ ಸಾಕ್ಷಿಯೂ ಅಷ್ಟು ಸಮಸ್ಯೆ ಇರಲಿಲ್ಲ ಎಂದು ನುಡಿಯುತ್ತಾರೆ. ನಮ್ಮ ತಂದೆ ಅಡಚಣೆ ಮತ್ತು ಸಾಲ ತೀರಿಸುವ ಸಲುವಾಗಿ 2003 ರಲ್ಲಿ ಮಾರಾಟ ಮಾಡಿದ್ದ ಎಂದರೆ ಸರಿಯಲ್ಲ. 2003 ರಿಂದ 2007 ರವರೆಗೆ 7 ನೇ ಪ್ರತಿವಾದಿಗೆ 1 ನೇ ದಾವಾ ಆಸ್ತಿಯನ್ನು ಉಳುಮೆ ಮಾಡಿದ್ದಾನೆಂದರೆ ಸಾಕ್ಷಿಯೂ 2016 ರ ನಂತರ ಉಳುಮೆ ಮಾಡಿದ್ದಾನೆಂದು ನುಡಿದಿರುತ್ತಾರೆ. ಈ ಬಗ್ಗೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ದಿನಾಂಕಃ 14.03.2007 ರಂದು 7 ನೇ ಪ್ರತಿವಾದಿ ರೂ.1,83,000/- ಹಣ ಪಡೆದು 8 ನೇ ಪ್ರತಿವಾದಿಗೆ 1 ನೇ ಆಸ್ತಿ ಮಾರಾಟ ಮಾಡಿದ್ದಾನೆಂದರೆ ನನಗೆ ಗೊತ್ತಿಲ್ಲ. ಈ ಬಗ್ಗೆ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. 2007 ರಿಂದ ಇಲ್ಲಿಯವರೆಗೆ 8 ನೇ ಪ್ರತಿವಾದಿ 1 ನೇ ಆಸ್ತಿಯನ್ನು ಉಳುಮೆ ಮಾಡುತ್ತಿದ್ದಾಳೆಂದರೆ ಸಾಕ್ಷಿಯೂ ಈಗ 4-5 ವರ್ಷದಿಂದ 8 ನೇ ಪ್ರತಿವಾದಿ ಉಳುಮೆ ಮಾಡುತ್ತಿದ್ದಾಳೆಂದು ನುಡಿಯುತ್ತಾರೆ. 2003 ರಿಂದ 8 ನೇ ಪ್ರತಿವಾದಿ ಉಳುಮೆ ಮಾಡುತ್ತಿದ್ದರೂ ಸಹಾ 2017 ರಿಂದ ಉಳುಮೆ ಮಾಡುತ್ತಿದ್ದಾಳೆಂತಾ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಮುಂದುವರೆದು ಪಾಟೀ ಸವಾಲಿಗೆ ಕಾಲಾವಕಾಶ ಕೇಳಿದ್ದರಿಂದ ಆದೇಶಿಸಿ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಅದೆ.

Sd/-

ದಿವಾಣಿ ನ್ಯಾಯಾಧೀಶರು,
ಬ್ಯಾಡಗಿ.